# Government of Karnataka
# Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 299/2024

ಸಿ ಡಬ್ಲ್ಯೂ- 11
ಪಿ ಡಬ್ಲ್ಯೂ- 09

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಹನುಮಂತಪ್ಪ |
| ತಂದೆಯ ಹೆಸರು | ಃ- | ರಾಮಜಿ |
| ವಯಸ್ಸು | ಃ- | 62 ವರ್ಷ |
| ಉದ್ಯೋಗ | ಃ- | ನಿವೃತ್ತ ಪಿ.ಎಸ್.ಐ |
| ವಾಸಸ್ಥಳ | ಃ- | ಲಿಂಗಸುಗೂರು |

***ದಿ. 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.***

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.***

ನಾನು ದಿನಾಂಕ 28-03-2022 ರಿಂದ 31-11-2024 ವರೆಗೆ ನಾನು ಲಿಂಗಸುಗುರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 07-06-2023 ರಂದು ಚಾ.ಸಾ-10 ರವರಿಂದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ದಿನಾಂಕ 02-07-2023 ರಂದು ಚಾ.ಸಾ-4 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ದಿನಾಂಕ 17-12-2023 ರಂದು ಆರೋಪಿತನಿಗೆ ನೋಟಿಸು ಜಾರಿ ಮಾಡಿರುತ್ತೇನೆ. ದಿನಾಂಕ 05-02-2024 ರಂದು ಚಾ.ಸಾ-1 ಮತ್ತು 4 ರವರ ಕರ್ತವ್ಯ ದೃಡಿಕರಣ ಪತ್ರ ಪಡೆದಿರುತ್ತೇನೆ. ಬಸ್ಸಿನ ಆಯಾ ದಿನದ ನಿವೇದನಾ ಪತ್ರವನ್ನು ಮತ್ತು ಬಸ್ಸಿನ ದಾಖಲೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿನಾಂಕ 30-01-2024 ರಂದು ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದ ಬಗ್ಗೆ ಮಾಹಿತಿ ನೀಡಿರುತ್ತಾರೆ. ದಿನಾಂಕ 06-02-2024 ರಂದು ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ದ ಅಂತಿಮ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ.

2. ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿ.ಪಿ-8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-8(ಬಿ) ಎಂದು ಗುರುತಿಸಲಾಯಿತು. ಕೆ.ಎಸ್.ಆರ್.ಟಿ.ಸಿ ರವರು ನೀಡಿದ

ಪತ್ರವನ್ನು ನಿ.ಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು. ಕರ್ತವ್ಯ ದೃಡಿಕರಣ ಪತ್ರವನ್ನು ನಿ.ಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-10(ಎ) ಎಂದು ಗುರುತಿಸಲಾಯಿತು. ಬಸ್ಸಿನ ಆಯಾ ದಿನದ ನಿವೇದನಾ ಪತ್ರ ಮತ್ತು ದಾಖಲಾತಿಗಳನ್ನು ಒಟ್ಟಾಗಿ ನಿ.ಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು.

***ಪಾಟೀ ಸವಾಲು: ಶ್ರೀ. ಎಸ್.ಹೆಚ್ .ಜಿ ವಕೀಲರಿಂದ. :-***

ಗಾಯದ ಪ್ರಮಾಣ ಪತ್ರ ಪಡೆದ ಬಗ್ಗೆ ಸಮಯ ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಬಸ್ಸಿನ ಆಯಾ ದಿನದ ನಿವೇದನಾ ಪತ್ರ ಮತ್ತು ದಾಖಲೆಗಳನ್ನು ಪಡೆದ ಬಗ್ಗೆ ಸಮಯ ನಮೂದಿಸಿಲ್ಲ ಎಂದರೆ ಸರಿ. ಈ ಕೇಸನಲ್ಲಿ ನಾನು ಯಾವುದೇ ಸರಿಯಾಗಿ ತನಿಖೆ ಮಾಡದೆ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರದಾನ ಸಿವಿಲ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.